ಪ್ರಬಂಧ



ಪ್ರಜ್ಞಾ ಮತ್ತೀಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

# ದಿನಕರನ ಕೊನೆಯ ಸಿಪ್

ಹಗಲಿಡೀ ಉರಿದುರಿದು ದಣಿದ ಸೂರ್ಯನೂ, ದುಡಿಮೆ ಮುಗಿಸಿದ ಜನರೂ ಕೂಡಿಯೇ ಮನೆಕಡೆ ಮುಖ ಮಾಡುವ ಸಮಯ. ಬಯಲಿನಾಚೆಯ ಸಣ್ಣ ದಿನಸಿ ಅಂಗಡಿಯಲ್ಲಿ ಮಾಸಿದ ಸೀರೆಯ ಹೆಂಗಸರು ಅಂದಂದಿನ ಅಕ್ಕಿ, ಬೇಳೆ, ಉಪ್ಪು–ಹುಣಿಸೆಗಳ ಪುಟ್ಟ ಪುಟ್ಟ ಪೊಟ್ಟಣಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ದುಡ್ಡು ತೆಗೆಯಲು ಕುಪ್ಪಸದೊಳಗಿನ ಸಂಚಿಯನ್ನು ಹೊರತೆಗೆದಿದ್ದಾರೆ. ಅದರೊಳಗಿನ ಬಾಡಿದ ಎಲೆಗಳ ನಡುವೆ ಸಣ್ಣಗೆ ಮಡಚಿದ ಹತ್ತರ ನೋಟುಗಳ ಮತ್ತೆ ಮತ್ತೆ ಮನದಲ್ಲೇ ಎಣಿಸುತ್ತ ಜಮಾ–ಖರ್ಚುಗಳ ಖಾತ್ರಿ ಮಾಡಿಕೊಳ್ಳುತ್ತಿದ್ದಾರೆ. ಅಲ್ಲೇ ಎರಡು ಬೀದಿಯಾಚೆಯ ವೈನುಶಾಪಿನೆದುರು ಮುಕುರಿಕೊಂಡಿರುವ ಅವರ ಗಂಡಂದಿರು ತಮ್ಮ ಬದುಕಿನ ಪರಮೋಚ್ಚ ಸಂತೋಷವನ್ನು ದೊರಕಿಸಿಕೊಳ್ಳುತ್ತಿರುವವರಂತೆ ಸಂಬಳದ ನೋಟು ಹಿಡಿದು ನಿಂತಿದ್ದಾರೆ. ಈ ಎರಡೂ ಬೀದಿಗಳ ನಡುವೆ ಮೈಚಾಚಿಕೊಂಡಿರುವ ಬಯಲಿಗೆ ಜೀವ ಬಂದಂತೆ ಗಲಗಲ ಆಡುತ್ತಿದ್ದ ಮಕ್ಕಳು, ಅಮ್ಮ ಕರೆಯುವ ವೇಳೆಯಾಯಿತೆಂದು ಆಟ ಮುಗಿಸುವ ಗಡಿಬಿಡಿಯಿಂದ ಕೂಗುವ, ಕೇಕೆ ಹಾಕುವ ಸಡಗರಕ್ಕೆ ಗೂಡಿಗೆ ಮರಳುವ ಹಕ್ಕಿಗಳು ಪಟಪಟ ರೆಕ್ಕೆ ಬಡಿಯುತ್ತವೆ. ವಾಯುವಿಹಾರಕ್ಕೆ ಬಂದ ಅಜ್ಜ–ಅಜ್ಜಿಯರು ಬೆಂಚುಗಳ ಮೇಲೆ ಇಳಿಬೆಳಕಿನ ರಂಗೋಲಿಯಂತೆ ಕುಳಿತಿದ್ದಾರೆ. ಏನೇನೂ ಅವಸರವಿಲ್ಲದ ಅವರ ಮುಖದ ಮೇಲೆ ಕೊನೆಯ ಕಿರಣದ ನಾಟ್ಯವಾಡಲಿಕ್ಕೆ ಸೂರ್ಯನಿಗೂ ಖುಷಿಯಾಗಿದೆ.

ಚೆಂಬೆಳಕಿನ ಕವಿಯ ಕವನವೊಂದು ನೆನಪಾಗುತ್ತಿದೆ

ಸಂಜೆವೆಣ್ಣಿನ ಸಕಲ ಸೌಭಾಗ್ಯ ಹೊಮ್ಮುತಿದೆ
ಕಿಂಜಲ್ಕ ಕುಸುಮಗಳ ಹುಡಿಯ ಹಾರಿಸಿದಂತೆ
ಕೆಂಪಗಾಗಿದೆ ಬಾನು ಕಿತ್ತಿಳೆಯ ತೊಳೆಯಂತೆ
ಕ್ಷಿತಿಜದಂಚಿನ ತುಟಿಗೆ ರಾಗ ರಂಗೇರುತಿದೆ

